ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:2172/2023
ಸಿ.ಡಬ್ಲ್ಯು. 13 ಪಿ.ಡಬ್ಲ್ಯೂ : 3

| | |
|---|---|
| ಸಾಕ್ಷಿದಾರರ ಹೆಸರು | ಕೆ.ಗಿರಿಯಪ್ಪ |
| ತಂದೆಯ ಹೆಸರು | ದಿವಂಗತ ಅಂಗು ಮುಗೇರ |
| ವಯಸ್ಸು | 49 ವರ್ಷ |
| ಉದ್ಯೋಗ | ಎ.ಎಸ್.ಐ. |
| ವಾಸಸ್ಥಳ | ಮಂಗಳೂರು. |

ದಿನಾಂಕಃ 23.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ದಕ್ಷಿಣ ಕನ್ನಡ ಜಿಲ್ಲೆ ಅಪರಾಧ ಪತ್ತೆ ವಿಭಾಗದಲ್ಲಿ ಪೇದೆಯಾಗಿ ದಿನಾಂಕ 14.08.2004 ರಿಂದ ದಿನಾಂಕ 18.05.2008 ರ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ನಮ್ಮ ಪೋಲೀಸ್ ನಿರೀಕ್ಷಕರಾದ ತಿಲಕ್ ಚಂದ್ರರವರು ಬರ್ಕೆ ಪೋಲೀಸ್ ಠಾಣಾ ಅಪರಾಧ ಕ್ರಮಾಂಕ 86/2005 ನೇ ಪ್ರಕರಣದಲ್ಲಿ ದಸ್ತಗಿರಿಯಾದ ಆರೋಪಿಗಳಾದ ಸುದರ್ಶನ್ ಮತ್ತು ಮಣಿಕಂಠರವರು ಕಳ್ಳತನ ಮಾಡಿದ ಚಿನ್ನಾಭರಣಗಳ ಪೈಕಿ ಪಡುಬಿದ್ರಿ ಠಾಣೆಯ ಗುನ್ನಾ ಸಂಖ್ಯೆ 55/2004 ರ ಪ್ರಕಣದಲ್ಲಿ ಕಳ್ಳತನವಾದ ಹವಳದ ಚೈನ್-1, ಕೂರ್ಗಿ ಡಿಸೈನ್ ಬಳೆ-1 ಜೊತೆ, ಫ್ಯಾಷನ್ ಬಳೆ-1 ಜೊತೆ, ಒಂದು ವರಲಕ್ಷ್ಮಿ ಪೆಂಡೆಂಟ್-1, ಒಂದು ದಳಪತಿ ಚೈನ್, ಇನ್ನೊಂದು ಕಿವಿಯ ಬೆಂಡೋಲೆ-1 ಜೊತೆ, ಚಿನ್ನದ ಉಂಗುರಗಳು 3 ಸ್ವತ್ತುಗಳನ್ನು ನನ್ನ ಕೈಯಲ್ಲಿ ನೀಡಿದ್ದನ್ನು ಪಡುಬಿದ್ರಿ ಠಾಣೆಗೆ ಹಾಜರಾಗಿ ಚಾ.ಸಾ.17 ರವರ ಮುಂದೆ ಹಾಜರುಪಡಿಸಿರುತ್ತೇನೆ. ಅವರ ಈ ಪ್ರಕರಣದ ಚಾ.ಸಾ.1 ರವರನ್ನು ಬರಮಾಡಿಕೊಂಡು ಅವರು ಗುರ್ತಿಸಿದ ಮೇರೆಗೆ ಚಾ.ಸಾ.11 ಮತ್ತು 12 ರವರ ಸಮಕ್ಷಮ ಮಹಜರ್ ಮುಖೇನ ವಶಪಡಿಸಿಕೊಂಡಿರುತ್ತಾರೆ. ಸದ್ರಿ ಮಹಜರ್ ನಿಪಿ.3 ಎಂದು , ಸಾಕ್ಷಿಯವರ ಸಹಿಯನ್ನು ನಿಪಿ.3(ಎ) ಎಂದು ಗುರ್ತಿಸಲಾಯಿತು.

ಪಾಟೀ ಸವಾಲುಃ ಆರೋಪಿಯವರ ಪರವಾಗಿ ಶ್ರೀ ಪಿ.ಎಸ್.ಜಿ. ವಕೀಲರವರಿಂದಃ

ನನ್ನ ಕಛೇರಿಯಲ್ಲಿ ಚಿನ್ನಾಭರಣಗಳನ್ನು ಚಾ.ಸಾ.1 ರವರು ನನಗೆ ಹಸ್ತಾಂತರಿಸಿರುತ್ತಾರೆ. ಸದ್ರಿ ಚಿನ್ನಾಭರಣಗಳನ್ನು ನನಗೆ ಕೊಡುವುದಕ್ಕಿಂತ ಮುಂಚೆ ಮಹಜರ್ ನ್ನು ಮಾಡಿರುತ್ತಾರೆ. ಸದ್ರಿ ದಾಖಲೆ ನನಗೆ ನೆನಪಿರುವುದಿಲ್ಲ. ಸದ್ರಿ ದಾಖಲೆ ನನ್ನ ಕಛೇರಿಯಲ್ಲಿರುವುದು ನನಗೆ ಗೊತ್ತಿರುವುದಿಲ್ಲ. ಸಿ.ಆರ್.86/2005 ಬರ್ಕೆ ಪೊಲೀಸ್ ಠಾಣೆಗೆ ಸಂಬಂಧಪಟ್ಟ ಕಡತದಲ್ಲಿ ಮಹಜರ್ ದಾಖಲೆ ಇರುತ್ತದೆ. ಆ ರೀತಿ ಯಾವುದೇ ದಾಖಲೆಗಳಿರುವುದಿಲ್ಲವೆಂದರೆ ಸರಿಯಲ್ಲ. ಸದ್ರಿ ಚಿನ್ನಾಭರಣಗಳನ್ನು ಚಾ.ಸಾ.1 ರವರು ನನಗೆ ಹಸ್ತಾಂತರಿಸುವ ಸಮಯದಲ್ಲಿ ಬರವಣಿಗೆ ಆಗಿರುತ್ತದೆ. ನನ್ನ ಸಮಕ್ಷಮದಲ್ಲಿ ಸದ್ರಿ ಚಿನ್ನಾಭರಣಗಳನ್ನು ತೂಕ ಮಾಡಿ ನೀಡಿರುತ್ತಾರೆ. ಅದನ್ನು ತೂಕ ಮಾಡುವಾಗ ಅಕ್ಕ ಸಾಲಿಗರು ಇದ್ದರು. ಸದ್ರಿ ದಾಖಲೆಗೆ ಅಕ್ಕ ಸಾಲಿಗರ ಸಹಿಯನ್ನು ಪಡೆದುಕೊಂಡ ಬಗ್ಗೆ ನನಗೆ ನೆನಪಿರುವುದಿಲ್ಲ. ಸದ್ರಿ ಚಿನ್ನಾಭರಣಗಳನ್ನು ಸ್ವೀಕರಿಸಿದ ಬಗ್ಗೆ ಲಿಖಿತ ದಾಖಲೆ ಇರುತ್ತದೆ. ಪಡುಬಿದ್ರಿ ಠಾಣೆಯಲ್ಲಿ ತೆಗೆದುಕೊಳ್ಳುವ ಸಮಯದಲ್ಲಿ ಸದ್ರಿ ಚಿನ್ನಾಭರಣಗಳು ಎಷ್ಟು ತೂಕ ಮತ್ತು ಚಿನ್ನ ಇದೆಯಾ ಇಲ್ಲವೋ ಎಂದು ಯಾರು ನನಗೆ ತಿಳಿಸಿರುತ್ತಾರೆಂದರೆ ನನಗೆ ನೆನಪಿಲ್ಲ. ಸದ್ರಿ ಚಿನ್ನಾಭರಣಗಳು ಪ್ರತ್ಯೇಕ ವಸ್ತು ನನಗೆ ಹೇಗೆ ತಿಳಿದು ಬಂತೆಂದರೆ ಸಾಕ್ಷಿಯವರು ನಮ್ಮ ಪೋಲೀಸ್ ಠಾಣೆಯ ಸಿಬ್ಬಂದಿ ವಶಪಡಿಸಿಕೊಳ್ಳುವ ಸಮಯದಲ್ಲಿ ಹೋಗಿದ್ದ ಸದ್ರಿ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದು ತೀರ್ಥಹಳ್ಳಿಯಲ್ಲಿರುವ ಒಂದು ಜ್ಯುವೆಲರಿ ಅಂಗಡಿ ಅದರ ಹೆಸರು ಉಷಾರ ಜ್ಯುಯಲರ್ಸ್ ಅಲ್ಲಿ ತೂಕ ಮಾಡಿ ಮಹಜರ್ ಮಾಡಿರರುತ್ತಾರೆ ಅದನ್ನು ನೋಡಿ ನಾನು ಹೇಳಿರುತ್ತೇನೆ. ಸದ್ರಿ ಮಹಜರ್ ನ್ನು ಯಾರು ಬರೆದಿರುತ್ತಾರೆಂದು ನನಗೆ ನೆನಪಿರುವುದಿಲ್ಲ. ಫಿರ್ಯಾದಿದಾರರು

ಕರೆಸಿದ ನಂತರ ಠಾಣೆಗೆ ಬಂದಿರುತ್ತಾರೆ. ತೆಗೆದುಕೊಳ್ಳುವ ವಸ್ತುಗಳು ಚಿನ್ನಾಭರಣಗಳು ಇರುವುದಿಲ್ಲ, ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದು, ಸುಳ್ಳು ಮತ್ತು ನಕಲಿ ಆಭರಣಗಳಿರುತ್ತವೆಂದರೆ ಸರಿಯಲ್ಲ ಮತ್ತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ
ಉಡುಪಿ.